# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 429(499) |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 12-12-2024 |
| ಉತ್ತರಿಸುವವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ. ಸಂ. | ವಿಷಯ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ತೀವ್ರ ಸಂಕಷ್ಟದಲ್ಲಿರುವ ಅಸ್ಪೃಶ್ಯ ಅಲೆಮಾರಿ "ಮಾದಿಗ ದಾಸರಿ" (ಮಾದಿಗ ದಾಸು) ಸಮುದಾಯದ ಹೆಸರು ಎಸ್.ಸಿ ಜಾತಿ ಪಟ್ಟಿಯಲ್ಲಿ ನೋಂದಾಯಿಸುವ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಮಾಡುವ ಪ್ರಕ್ರಿಯೆ ವಿಳಂಬವಾಗಿರುವುದೇಕೆ; (ವಿವರ ನೀಡುವುದು) | "ಮಾದಿಗ ದಾಸರಿ" ಸಮುದಾಯದ ಕುಲ ಶಾಸ್ತ್ರೀಯ ಅಧ್ಯಯನದ ವರದಿ ಬಂದಿದೆ. ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದೆ. ಸಧ್ಯದಲ್ಲಿಯೇ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು. |
| ಆ). | ಸರ್ಕಾರದಲ್ಲಿ ಈಗಾಗಲೇ ಈ ಸಮುದಾಯದ ಕುರಿತು ಕುಲ ಶಾಸ್ತ್ರೀಯ ಅಧ್ಯಯನದ ವರದಿ ಲಭ್ಯವಿದ್ದರೂ ಕೂಡ ಇನ್ನು ಪರಿಶೀಲಿಸಲು ತೆಗೆದುಕೊಳ್ಳುವ ಕಾಲಾವಧಿ (ಸಮಯ) ಎಷ್ಟು; ಮತ್ತು ಯಾವಾಗ ಕೇಂದ್ರ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸು ಪ್ರಸ್ತಾವನೆ ಸಲ್ಲಿಸಲಾಗುವುದು; (ವಿವರ ನೀಡುವುದು) | |
| ಇ) | ಸ್ವಾತಂತ್ರ್ಯ ನಂತರವು ಕೂಡ ಸಾಮಾಜಿಕ ನ್ಯಾಯದಿಂದ ವಂಚಿತವಾಗಿರುವ, ಈಗಲು ಜಾತಿ ಪ್ರಮಾಣ ಪತ್ರ ಪಡೆಯಲು ತೊಂದರೆ ಅನುಭವಿಸುತ್ತಿರುವ ಅತೀ ಹಿಂದುಳಿದ ಭೂ ರಹಿತ ಅಲೆಮಾರಿ "ಮಾದಿಗ ದಾಸರಿ" ಸಮುದಾಯಕ್ಕೆ ಸರ್ಕಾರ ಯಾವ ರೀತಿ ಸಾಮಾಜಿಕ ನ್ಯಾಯ ಒದಗಿಸಲಿದೆ; (ವಿವರ ನೀಡುವುದು) | ಭಾರತ ಸಂವಿಧಾನದ ಅನುಚ್ಛೇದ 341 (2)ರ ಪ್ರಕಾರ ಯಾವುದೇ ಜಾತಿ ಅಥವಾ ಉಪ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸುವ / ಬದಲಾಯಿಸುವ ಅಧಿಕಾರ ಭಾರತದ ಸಂಸತ್‌ಗೆ ಇರುತ್ತದೆ. ರಾಜ್ಯ ಸರ್ಕಾರಕ್ಕೆ ಈ ರೀತಿಯ ಅಧಿಕಾರ ಇರುವುದಿಲ್ಲ. ಸದರಿ ಸಮುದಾಯವು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಇಲ್ಲದೇ ಇರುವುದರಿಂದ ಸರ್ಕಾರಿ ಸೌಲಭ್ಯ ಪಡೆಯಲು ಸಾಧ್ಯವಿಲ್ಲ. |
| ಈ) | ರಾಜ್ಯದಲ್ಲಿ ಪ್ರಸ್ತುತ ಈ ಸಮುದಾಯದ ಮಕ್ಕಳ ವಿದ್ಯಾಭ್ಯಾಸ, ಉದ್ಯೋಗ, ಸರ್ಕಾರಿ ಸೌಲಭ್ಯ ಬಡವರ ಕಲ್ಯಾಣಕ್ಕೆ ನೀಡುವುದು) ಯಾವ ರೀತಿ ನ್ಯಾಯವನ್ನು ಸರ್ಕಾರ ಒದಗಿಸಲಿದೆ? (ವಿವರ ನೀಡುವುದು) | |

ಸಕಇ 8 ಆರ್‌ಐ 2024

(ಡಾ: ಹೆಚ್.ಸಿ.ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು